## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

ಎಸ್.ಸಿ. ಸಂಖ್ಯೆ 369/2022

| | | |
|---|---|---|
| ಸಾಕ್ಷಿದಾರರ ಹೆಸರು | : ಮನೋಜ್ | ಪಿಡಬ್ಲ್ಯೂ : 1 |
| ತಂದೆಯ / ಗಂಡನ ಹೆಸರು | : ಚೆಲುವರಾಜ್ | ಪಿಡಬ್ಲ್ಯೂ : 3 |
| ವಯಸ್ಸು | : 28 ವರ್ಷ | |
| ಉದ್ಯೋಗ | : ಹೊಟೆಲ್ ವ್ಯಾಪಾರ | |
| ವಾಸಸ್ಥಳ | : ನಜರ್ಬಾದ್ , ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 09.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ಈಗ ತೋರಿಸಿದ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು, ಅದನ್ನು ನಿಪಿ 1 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 1(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಮೈಸೂರಿನ ರಾಘವೇಂದ್ರ ನಗರದ ಬಳಿಯಲ್ಲಿ ಹಾದು ಹೋಗುವ ರಾಜ ಕುಮಾರ್ ರಸ್ತೆಯಲ್ಲಿ ನಾನು ಹೋಗಿ ಒಂದು ಪೆಟ್ರೋಲ್ ಪಂಪ್ ನಲ್ಲಿ ಪೆಟ್ರೋಲ್ ಹಾಕಿಸುತ್ತಿದ್ದಾಗ ನಜರ್ಬಾದ್ ಪೋಲೀಸರು ಕರೆದು ಒಂದು ಸಹಿ ಹಾಕಲು ಹೇಳಿದರು. ನಾನು ಸಹಿ ಹಾಕಿದೆ. ಅವರು ಯಾವ ಕಾರಣಕ್ಕಾಗಿ ನನ್ನ ಸಹಿಯನ್ನು ಪಡೆದರು ಎನ್ನುವುದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಮಾತ್ರ ಅಲ್ಲಿ ಸಹಿ ಹಾಕಿರುತ್ತೇನೆ. ನಾನು ಸಹಿ ಹಾಕಿದಾಗ ಸಮಯ ಅಂದಾಜು ಸಂಜೆ 04.30 ಗಂಟೆ ಆಗಿತ್ತು. ಸದರಿ ಬರವಣಿಗೆಯಲ್ಲಿ ಏನನ್ನು

ಬರೆಯಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಪೋಲೀಸರ ಪರಿಚಯ ಇದ್ದುದ್ದರಿಂದ ಸಹಿ ಹಾಕಿರುತ್ತೇನೆ. ಅ ಸಮಯದಲ್ಲಿ ಪೋಲೀಸರು ನನಗೆ ಯಾವುದೇ ವಸ್ತುಗಳನ್ನು ತೋರಿಸಿರುವುದಿಲ್ಲ. ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ. ಯಾವ ವ್ಯಕ್ತಿಗಳನ್ನು ಪೋಲೀಸರು ನನಗೆ ತೋರಿಸಿರುವುದಿಲ್ಲ. ನಾನು ನಜರ್ ಬಾದ್ ನ ನಿವಾಸಿ . ರಾಜಕುಮಾರ ರಸ್ತೆ ನನಗೆ ಗೊತ್ತು. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀ ಸವಾಲು ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

2. ಯಾವುದಾದರು ಬರವಣಿಗೆಗೆ, ದಾಖಲಾತಿಗೆ ಸಹಿ ಹಾಕುವಾಗ ಅದರಲ್ಲಿ ಬರೆದಿರುವ ವಿಷಯಗಳನ್ನು ಓದಿ ತಿಳಿದುಕೊಂಡು ಸಹಿ ಹಾಕುತ್ತೇನೆ ಎನ್ನುವುದು ಸರಿ. ನಜರ್ ಬಾದ್ ನ ರಾಜಣ್ಣನ ಮಗ ಕಿರಣ್ ನನಗೆ ಗೊತ್ತಿಲ್ಲ. ಆತ ನನಗೆ ಚೆನ್ನಾಗಿ ಗೊತ್ತಿರುವ ವ್ಯಕ್ತಿ ಎನ್ನುವುದು ಸರಿಯಲ್ಲ.

3. ದಿಃ 07.08.2019 ರಂದು ನಜರ್ ಬಾದ್ ಪೋಲೀಸರು ನನ್ನನ್ನು ಮತ್ತು ಕಿರಣನನ್ನು ನಜರ್ ಬಾದ್ ಮೊಹಲ್ಲಾದ ರಾಜ ಕುಮಾರ್ ರಸ್ತೆಯಲ್ಲಿರುವ ಕ್ರೌನ್ ರೆಸಿಡೆನ್ಸಿಯ 3 ನೇ ಮಹಡಿಯಲ್ಲಿರುವ ರೂಂ ನಂ. 307 ಮತ್ತು 308 ಕ್ಕೆ ಕರೆದುಕೊಂಡು ಹೋಗಿದ್ದರು ಎನ್ನುವುದು ಸರಿಯಲ್ಲ. ಮಲ್ಲೇಶ್ ಎನ್ನುವ ಇನ್ಸ್ ಪೆಕ್ಟರ್ ಮತ್ತು ಅವರ ಸಿಬ್ಬಂದಿ ಇದ್ದು , ಇಲ್ಲಿ ವೇಶ್ಯಾವಾಟಗೆ ನಡೆಯುತ್ತಿದೆ , ದಾಳಿ ಮಾಡಲು ಬಂದಿದ್ದೇವೆ ಎಂದು ತಿಳಿಸಿ ನಮಗೆ ಹೇಳಿದ್ದರು ಎನ್ನುವುದು ಸರಿಯಲ್ಲ. ನಂತರ ಕ್ರೌನ್ ರೇಸಿಡೆನ್ಸಿ ಲಾಡ್ಜ್ ಒಳಗೆ

ಹೋಗಿ ನೋಡಲಾಗಿ ಲಾಡ್ಜ್ ನ 3 ನೇ ಮಹಡಿಯಲ್ಲಿರುವ ಎಡ ಭಾಗದಲ್ಲಿ 3 ರೂಗಳಿದ್ದು , ಅದರಲ್ಲಿ ರೂಂ ನಂಬರ್ 307 ಮತ್ತು 308 ರೂಂಗಳಿದ್ದು ಸದರಿ ರೂಂಗಳ ಬಾಗಿಲುಗಳು ಮುಚ್ಚಿದ್ದು , ಚಿಲಕ ಹಾಕಿರಲಿಲ್ಲ ಎನ್ನುವುದು ಸರಿಯಲ್ಲ. ಸದರಿ ರೂಂಗಳ ಬಾಗಿಲುಗಳನ್ನು ತೆಗೆದು ನೋಡಲಾಗಿ 2 ರೂಂಗಳಲ್ಲೂ ಸಹ ಒಬ್ಬ ಗಂಡಸು ಹಾಗೂ ಒಬ್ಬ ಹೆಂಗಸು ಅರೆ ಬೆತ್ತಲೆಯಾಗಿ ಮಂಚದ ಮೇಲೆ ಮಲಗಿಕೊಂಡಿದ್ದು , ನಮ್ಮಗಳನ್ನು ಕಂಡು ಗಾಬರಿಯಿಂದ ಎಂದ್ದು ನಿಂತುಕೊಂಡಿದ್ದು, 2 ರೂಂಗಳಲ್ಲಿದ್ದವರಿಗೆ ಬಟ್ಟೆಯನ್ನು ಹಾಕಿಸಲಾಯ್ತು ಎನ್ನುವುದು ಸರಿಯಲ್ಲ. ರೂಂ ನಂ.307 ರಲ್ಲಿ ದೀಪಕ್ ಎನ್ನುವವನು ಸೋನಾಲಿ ಎನ್ನುವ ಮಹಿಳೆಯೊಂದಿಗೆ ವೇಶ್ಯಾವಾಟಿಕೆಯಲ್ಲಿ ತೊಡಗಿದ್ದರು ಎನ್ನುವುದು ಸರಿಯಲ್ಲ. ರೂಂ ನಂ.308 ರಲ್ಲಿ ಪ್ರಕಾಶ್ ಎನ್ನುವವನು ಮೋನಿಕಾ ಎನ್ನುವ ಮಹಿಳೆಯೊಂದಿಗೆ ವೇಶ್ಯಾವಾಟಿಕೆಯಲ್ಲಿ ತೊಡಗಿದ್ದರು ಎನ್ನುವುದು ಸರಿಯಲ್ಲ. ನಂತರ ಈ 4 ವ್ಯಕ್ತಿಗಳನ್ನು ಪೋಲೀಸರು ಅಂಗ ಶೋದನೆ ಮಾಡಲಾಗಿ , ದೀಪಕ್ ಬಳಿಯಲ್ಲಿ 2900/- ರೂ ನಗದು ಹಣ ಇದ್ದು , ಪ್ರಕಾಶ್ ನ ಬಳಿಯಲ್ಲಿ 600/- ರೂ ಇದ್ದು , ಮೇಲೆ ಹೇಳಿದ ರೂಂ ನಂಬರ್ ಗಳಲ್ಲಿ ಎರಡು ಕಾಂಡಂಗಳು ದೊರೆತಿದ್ದು , ಒಂದು ಸ್ಯಾಮಸಂಗ್ ಮೊಬೈಲ್ ಮತ್ತು ಒಂದು ಓಪೋ ಮೊಬೈಲ್ ಫೋನ್ ಗಳು ದೊರೆತಿದ್ದು, ಇವುಗಳೆಲ್ಲವನ್ನು ಪೋಲೀಸರು ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಮಹಜರ್ ಮಾಡಿ ನಮ್ಮ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. (ಈ ಹಂತದಲ್ಲಿ ನ್ಯಾಯಾಲಯದ ಮುಂದೆ , ಮೊಹರು ಮಾಡಿದ ಬಿಳಿಯ ಬಟ್ಟೆಯಿಂದ ಮೊಹರನ್ನು ಮೊದಲು ತೆಗೆದು ನಂತರ ಅದರಲ್ಲಿದ್ದ ವಸ್ತುಗಳಾದ ಎರಡು ಮೊಬೈಲ್ ಗಳು ಮತ್ತು

ಎರಡು ಕಾಂಡಂಗಳನ್ನು ತೋರಿಸಿ ಕೇಳಲಾಗಿ ಸಾಕ್ಷಿ ಅವುಗಳ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

4. ಇನ್ನೊಂದು ಮೊಹರು ಮಾಡಿದ ಬಿಳಿಯ ಬಟ್ಟೆಯ ಬ್ಯಾಗ್ ನಿಂದ ಅದರೊಳಗಿದ್ದ ಹಣವನ್ನು ತೆಗೆದು ತೋರಿಸಲಾಗಿ ಅದರಲ್ಲಿ ಒಟ್ಟು 3500/- ರೂ ಇದ್ದು , ಅದನ್ನು ನೋಡಿ ಸಾಕ್ಷಿ ತನಗೆ ಆ ಹಣದ ಬಗ್ಗೆ ಏನೂ ಗೊತ್ತಿಲ್ಲ ಎನ್ನುತ್ತಾರೆ.

5. ಸದರಿ ಮಹಜರ್ ನ್ನು ಸಂಜೆ 04.30 ರಿಂದ 05.30 ರ ವರೆಗೆ ಅಲ್ಲಿಯೇ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿಸಿ ನಂತರ ಠಾಣೆಯಿಂದ ಪ್ರಿಂಟ್ ಹಾಕಿಸಿ ತರಿಸಿ ಓದಿ ನೋಡಿ, ಸರಿ ಇದ್ದ ಕಾರಣ ನಾನು ಸಹಿ ಹಾಕಿರುತ್ತೇನೆ ಎನ್ನುವುದು ಸರಿಯಲ್ಲ. ನಾನು ನಿಪಿ 1 ನ್ನು ಓದಿ ನೋಡಿ ತಿಳಿದುಕೊಂಡು ಸಹಿ ಹಾಕಿರುತ್ತೇನೆ ಎನ್ನುವುದು ಸರಿಯಲ್ಲ. ನನ್ನೊಂದಿಗೆ ಕಿರಣ್ ಮತ್ತು ಪೋಲೀಸ್ ಸಿಬ್ಬಂದಿ ಸಹ ನಿಪಿ 1 ರ ಮೇಲೆ ಸಹಿ ಹಾಕಿರುತ್ತಾರೆ ಎನ್ನುವುದು ಸರಿಯಲ್ಲ. ಈ ಬಗ್ಗೆ ನನ್ನ ಹೇಳಿಕೆಯನ್ನು ತನಿಖಾಧಿಕಾರಿಯವರು ಪಡೆದಿರುತ್ತಾರೆ ಎನ್ನುವುದು ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಈಗ ಓದಿ ಹೇಳಿದಂತೆ, "ನಾನು ಮತ್ತು ಕಿರಣ ಇಬ್ಬರು ಮಧ್ಯಾಹ್ನ 15.45 ಗಂಟೆ ಸಮಯದಲ್ಲಿ …. **…. …. …. ….**ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಮೇಲ್ಕಂಡ ವ್ಯಕ್ತಿಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ " ಎಂದು ಹೇಳಿಕೆ ಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 2 ಎಂದು ಗುರುತುಪಡಿಸಿಕೊಳ್ಳಲಾಯಿತು.

6. ಎಲ್ಲಾ ವಿಷಯಗಳು ತಿಳಿದಿದ್ದರು ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿರದೇ ಇರುವುದರಿಂದ ಪಾಟೀ ಸವಾಲನ್ನು "ಇಲ್ಲ " ಎಂದು ತೆಗೆದುಕೊಳ್ಳಲಾಯಿತು.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**